(ಅ) ಕಳೆದ 5 ವರ್ಷಗಳಲ್ಲಿ ಉತ್ಪಾದನಾ ಗುರಿಯು ಈ ಕೆಳಕಂಡಂತೆ ಇದೆ:

(ಕೋಟಿ ರೂ.ಗಳಲ್ಲಿ)

ವರ್ಷಗಳು	ಎನ್‌ಜಿಇಎಫ್	ಎಂಎಲ್‌ಡಬ್ಲ್ಯೂಎ	ಕೆಎಸ್‌ಡಿಎಲ್
1994-95	173.65	86.78	73.92
1995-96	180.08	55.36	84.06
1996-97	161.22	47.18	102.31
1997-98	151.17	56.20	112.53
1998-99	141.85	55.20	120.92

(ಆ) 19 ಕಾರ್ಖಾನೆಗಳು ಸಂಪೂರ್ಣ ನಷ್ಟದಲ್ಲಿ ಇದೆ.

(ಇ) ಸರ್ಕಾರವು ಪರಿಣತರ ತಂಡವನ್ನೊಳಗೊಂಡ ಸಾರ್ವಜನಿಕ ಉದ್ಯಮಗಳ ಪುನರ್‌ನಿರ್ಮಾಣ ಆಯೋಗ ಒಂದನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಸಾಉಮ) 23 ಎಆರ್‌ಯು 2000 ದಿ: 15-3-2000ರಲ್ಲಿ ರಚಿಸಿದೆ. ಈ ಆಯೋಗವು ಪ್ರತಿಯೊಂದು ಉದ್ಯಮಕ್ಕೆ ಸಂಬಂಧಪಟ್ಟಂತೆ ವಿಶ್ಲೇಷಣೆ ನಡೆಸಿ ಪುನರ್ ರಚನೆ: ಬಂಡವಾಳ ಹಿಂತೆಗೆಯುವಿಕೆ: ಖಾಸಗೀಕರಣ ವಿಲೀನ: ಮುಚ್ಚುವಿಕೆ ಮುಂತಾದ ವಿಷಯಗಳಲ್ಲಿ ಸಲಹೆಯನ್ನು ನೀಡುವುದು. ಈ ಆಯೋಗದ ಶಿಫಾರಸ್ಸುಗಳು ಬಂದ ನಂತರ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದು.

ಈ ವರ್ಷ ರಾಜ್ಯದಲ್ಲಿ ವಿದ್ಯುತ್ ಉಪಠಾಣೆಗಳ ಪ್ರಾರಂಭ

1851 (2509) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಈ ವರ್ಷ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿದ್ಯುತ್ ಉಪಠಾಣೆಗಳನ್ನು (33 ಕೆ.ವಿ) ಸ್ಥಾಪಿಸಲಾಗುವುದು; (ಜಿಲ್ಲಾವಾರು ಅಂಕಿ-ಅಂಶಗಳನ್ನು) (ಒದಗಿಸುವುದು)

(ಆ) ಈ ಬಗ್ಗೆ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು ಅದರ ಪೈಕಿ ಎಷ್ಟನ್ನು ಈ ಹಣಕಾಸು ವರ್ಷದಲ್ಲಿ ಪೂರ್ಣಗೊಳಿಸಲಾಗುವುದು; (ಜಿಲ್ಲಾವಾರು ಅಂಕಿ-ಅಂಶಗಳನ್ನು ಒದಗಿಸುವುದು)

(ಇ) ಈ ಪೈಕಿ ಬೀದರ್ ಜಿಲ್ಲೆಯಿಂದ 33 ಕೆವಿ ಉಪಠಾಣೆಗಳ ಪ್ರಾರಂಭಕ್ಕಾಗಿ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)

(ಈ) ಜಿಲ್ಲೆಯಲ್ಲಿ ಈ ವರ್ಷ ಯಾವ ಯಾವ ಸ್ಥಳಗಳಲ್ಲಿ 33 ಕೆ.ವಿ. ಉಪಠಾಣೆಯನ್ನು ಪ್ರಾರಂಭಿಸಲಾಗುವುದು;

(ಉ) ಇದಕ್ಕಾಗಿ ವೆಚ್ಚ ಮಾಡುತ್ತಿರುವ ಹಣವೆಷ್ಟು?

ಶೀ ವೀರಕುಮಾರ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು)

(ಅ) ಪ್ರಸ್ತುತ ವರ್ಷ (2000-2001)ದಲ್ಲಿ ಸ್ಥಾಪಿಸಲು ಗುರಿ ಹೊಂದಿರುವ 33 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(ಆ) 1999-2000ರ ಸಾಲಿನಲ್ಲಿ 33 ಕೆ.ವಿ. ಸ್ಟೇಷನ್ನುಗಳ ನಿರ್ಮಾಣದ ಬಗ್ಗೆ ನಿಗಮಕ್ಕೆ ಬಂದಿರುವ ಒಟ್ಟು ಪ್ರಸ್ತಾವನೆಗಳ ಸಂಖ್ಯೆ-43. ಈ ಪ್ರಸ್ತಾವನೆಗಳನ್ನು ತಾಂತ್ರಿಕ ಮತ್ತು ಆರ್ಥಿಕ ದೃಷ್ಟಿಯಿಂದ ಪರಿಶೀಲಿಸಿದ ನಂತರ ನಿಗಮದ ತಾಂತ್ರಿಕ ಸಮಿತಿಯು ಅನುಮೋದನೆ ನೀಡುವ ಪ್ರಸ್ತಾವನೆಗಳಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ನಿಗಮದ ಆಡಳಿತಾತ್ಮಕ ಅನುಮೋದನೆಯಾದ ನಂತರ ಕೆಲಸ ಕೈಗೆತ್ತಿಕೊಳ್ಳಲು ಸಾಧ್ಯವಾಗುವುದು. ಅಲ್ಲದೇ ಕೆ.ವಿ.ನಿ.ನಿ.ಯು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ತನ್ನದೇ ಆದ ಸಂಪನ್ಮೂಲಗಳಿಂದ ಈ ಕಾಮಗಾರಿಗಳನ್ನು ಕೈಗೊಳ್ಳುವುದು ಕಷ್ಟಕರ. ಅದುದರಿಂದ, ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯುವುದು ಅವಶ್ಯಕವಾಗಿರುತ್ತದೆ. ಇದಲ್ಲದೆ, ಈ ಉಪಕೇಂದ್ರಗಳ ನಿರ್ಮಾಣಕ್ಕೆ ಅವಶ್ಯಕವಾದ ಜಮೀನನ್ನು ನಿಗಮವು ಸ್ವಾಧೀನ ಪಡಿಸಿಕೊಂಡ ನಂತರ ಉಪಕೇಂದ್ರದ ನಿರ್ಮಾಣ ಕಾರ್ಯ ಸಾಧ್ಯವಾಗುತ್ತದೆ. ಹೀಗಾಗಿ, ಯಾವುದೇ ಕಾಮಗಾರಿಯನ್ನು ಈ ಹಣಕಾಸಿನ ವರ್ಷದಲ್ಲಿ ಪೂರ್ಣಗೊಳಿಸಲು ಸಾಧ್ಯವಿಲ್ಲ.

33 ಕೆ.ವಿ. ಸ್ಟೇಷನ್ನುಗಳ ನಿರ್ಮಾಣಕ್ಕಾಗಿ ಸ್ವೀಕೃತವಾಗಿರುವ ಪ್ರಸ್ತಾವನೆಗಳ ಸಂಖ್ಯೆಯ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ.

ಕ್ರಮಸಂಖ್ಯೆ	ಜಿಲ್ಲೆಯ ಹೆಸರು	ಪ್ರಸ್ತಾವನೆಗಳ ಸಂಖ್ಯೆ
1	2	3
1.	ಹಾವೇರಿ	2
2.	ಬಿಜಾಪುರ	3
3.	ಬಾಗಲಕೋಟೆ	5
4.	ಉತ್ತರ ಕನ್ನಡ	3
5.	ಬೆಳಗಾವಿ	4
6.	ಧಾರವಾಡ	1
7.	ಕೊಪ್ಪಳ	9
8.	ರಾಯಚೂರು	6
9.	ಗುಲ್ಬರ್ಗಾ	8
10.	ಬಳ್ಳಾರಿ	1
11.	ಬೀದರ್	1
	ಒಟ್ಟು	43

(ಇ) ಈ ಪೈಕಿ ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ವೆರಹಕರ ಗ್ರಾಮದಲ್ಲಿ ಒಂದು 33:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸ್ಥಾಪನೆ ಬಗ್ಗೆ ಒಂದು ಪ್ರಸ್ತಾವನೆಯು ಬಂದಿರುತ್ತದೆ.

(ಈ) ಬೀದರ್ ಬಿಲ್ಲೆಯಲ್ಲಿ ಈ ವರ್ಷ ಬಗದಾಲ್ ಮತ್ತು ಭೋಸ್ಗಾ ಗ್ರಾಮಗಳಲ್ಲಿನ 33 ಕೆ.ವಿ. ಉಪ ಕೇಂದ್ರದ ಕೆಲಸಗಳು ಈಗಾಗಲೇ ಪ್ರಗತಿಯಲ್ಲಿರುತ್ತವೆ. ಈ ಉಪಕೇಂದ್ರಗಳನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಿ ಕಾರ್ಯಾರಂಭ ಮಾಡಿಸಲು ಗುರಿಯನ್ನು ಹೊಂದಲಾಗಿದೆ.

(ಉ) ಈ 33 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗಾಗಿ ತಗಲುವ ಒಟ್ಟು ಅಂದಾಜು ವೆಚ್ಚ 332 ಲಕ್ಷ ರೂ.ಗಳು ಬರದಾಲ್ ಉಪಕೇಂದ್ರಕ್ಕೆ ತಗಲುವ ಅಂದಾಜು ವೆಚ್ಚ 136 ಲಕ್ಷ ರೂ. ಹಾಗೂ ಭೋಸ್ಗಾ ಉಪಕೇಂದ್ರಕ್ಕಾಗಿ ತಗಲುವ ಅಂದಾಜು ವೆಚ್ಚ 196 ಲಕ್ಷ ರೂ.

2000-2001 ಸಾಲಿನಲ್ಲಿ ಸ್ಥಾಪಿಸಲು ಗುರಿ ಹೊಂದಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಜಿಲ್ಲಾವಾರು ವಿವರಗಳು.

ಕ್ರಮ ಸಂಖ್ಯೆ	ಜಿಲ್ಲೆ	ಉಪಕೇಂದ್ರದ ಹೆಸರು
1.	ಚಿಕ್ಕಮಗಳೂರು	ಶೃಂಗೇರಿ
2.	ದಕ್ಷಿಣ ಕನ್ನಡ	ಧರ್ಮಸ್ಥಳ
3.	-----"-----	ತೊಕ್ಕೊಟ್ಟು
4.	ಹಾವೇರಿ	ಕೆರೆಮಟ್ಟಿಹಳ್ಳಿ
5.	ಗದಗ	ಮುಶಿಗೆರೆ
6.	ಬಿಜಾಪುರ	ಕೋರವಾರ
7.	----"----	ನೇವರಗಿ
8.	ಬಾಗಲಕೋಟೆ	ಘೆಸಿ
9.	-----"------	ನಂದಗಾಂವ್
10.	------"------	ಹಿಪ್ಪರಗಿ
11.	ಬಳ್ಳಾರಿ	ಹಚೋಲಿ
12.	ಬಳ್ಳಾರಿ	ಅಲಂವಂಡಿ
13.	ರಾಯಚೂರು	ಭೋಗಾಪುರ
14.	-----"----	ಅರಕೆರೆ
15.	ಗುಲ್ಬರ್ಗಾ	ಕಕ್ಕೇರ

16.	----"---	ಬಲೆಚಕ್ರ
17.	----"----	ಹತ್ತಿಕುಣಿ
18.	----"----	ನರಸಾಂಬ
19.	----"-----	ತಡ್ಕಲೆ
20.	-----"-----	ನಲ್ವಾರ್
21.	ಬೀದರ್	ಬಗ್ದಾಳ
22.	ಬೀದರ್	ಭೋಸಗಿ

ರಾಜ್ಯದಲ್ಲಿ ಅನರ್ಹಜನರು ಹಸಿರು ಕಾರ್ಡುಗಳನ್ನು ಹೊಂದಿರುವ ಬಗ್ಗೆ

1852 (2510) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಸಾವಿರಾರು ಅನರ್ಹ ಜನರು ಹಸಿರು ಕಾರ್ಡುಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಎಷ್ಟು ಅನರ್ಹ ಜನರು ಹಸಿರು ಕಾರ್ಡುಗಳನ್ನು ಹೊಂದಿದ್ದಾರೆ; ಇವರ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ರೂಪಿಸಿದೆ;

(ಆ) ಕಾರ್ಡುಗಳ ಗಣಕೀಕರಣ ಮಾಡುವುದರಿಂದ ಇಂತಹ ಪಿಡುಗನ್ನು ತಡೆದು ಅವುಗಳ ಉಸ್ತುವಾರಿ ಮತ್ತು ತಪಾಸಣೆಗಳಿಗೆ ಅನುಕೂಲವಾಗುವುದು ನಿಜವಲ್ಲವೇ;

(ಇ) ಹಾಗಿದ್ದಲ್ಲಿ ಈ ಪ್ರಕ್ರಿಯೆ ಬೆಂಗಳೂರಿನಲ್ಲಿ 2001 ಮಾರ್ಚ್ 31ರೊಳಗೆ ಪೂರ್ಣಗೊಳ್ಳುವುದು ನಿಜವಲ್ಲವೆ; ಹಾಗಿದ್ದಲ್ಲಿ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ಯಾವಾಗ ಈ ಪ್ರಕ್ರಿಯೆಯನ್ನು (ಗಣಕೀಕರಣ ಮಾಡುವುದನ್ನು) ಪ್ರಾರಂಭಿಸಲಾಗುವುದು.

(ಈ) ಇದಕ್ಕಾಗಿ ವೆಚ್ಚವಾಗುವ ಅಂದಾಜು ವೆಚ್ಚವೆಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

(ಅ) ಹೌದು ಬಂದಿದೆ. ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಅನರ್ಹರು ಹೊಂದಿರುವ ಹಸಿರು ಪಡಿತರ ಚೀಟಿಗಳು ಹಾಗೂ ನಕಲಿ ಪಡಿತರ ಚೀಟಿಗಳನ್ನು ಗುರುತಿಸಲು ಕೈಗೊಂಡ ಅಂದೋಲನದಲ್ಲಿ ಪಡಿತರ ಚೀಟಿದಾರರು ನೀಡಿದ ಸ್ವಯಂ ಘೋಷಣಾ ಪತ್ರದಂತೆ ರಾಜ್ಯದಲ್ಲಿ 8.22 ಲಕ್ಷ ಅನರ್ಹರು ಹಸಿರು ಪಡಿತರ ಚೀಟಿ ಹೊಂದಿರುವುದನ್ನು ಪತ್ತೆ ಹೆಚ್ಚಲಾಗಿದೆ. ತದನಂತರ 1.02 ಲಕ್ಷ ಅನರ್ಹ ಹಸಿರು ಕಾರ್ಡುಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ.